ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1368
ಉತ್ತರಿಸಬೇಕಾದ ದಿನಾಂಕ : 24.12.2021
ಸದಸ್ಯರ ಹೆಸರು : ಶ್ರೀ ಅರವಿಂದ ಕುಮಾರ ಅರಳಿ
(ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಬೀದರ್ ನಗರದ ಕ್ರೀಡಾಂಗಣವನ್ನು ಹೊಸದಾಗಿ ನಿರ್ಮಾಣ ಮಾಡಲಾಗಿದ್ದು, ಇನ್ನೂ ಕೆಲಸ ಪೂರ್ಣಗೊಳ್ಳದಿರುವುದು ಸರ್ಕಾರದ ಗಮನದಲ್ಲಿದೆಯೇ;	ಬೀದರ್ ನಗರದ ನೆಹರೂ ಜಿಲ್ಲಾ ಕ್ರೀಡಾಂಗಣವನ್ನು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ರೂ 466.61 ಲಕ್ಷಗಳ ವೆಚ್ಚದಲ್ಲಿ ಪುನರ್-ನಿರ್ಮಿಸಲು ವಿವಿಧ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಅನುಮೋದಿತ ಅಂದಾಜು ಪಟ್ಟಿಯಂತೆ ಒಟ್ಟು ರೂ. 463.87 ಲಕ್ಷಗಳ ವೆಚ್ಚದಲ್ಲಿ ಕೆಳಕಂಡ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ;- 1. ಉತ್ತರ ಮತ್ತು ದಕ್ಷಿಣ ಭಾಗದ ಏಳು ಹಂತದ ಆರ್.ಸಿ.ಸಿ. ಪ್ರೇಕ್ಷಕರ ಗ್ಯಾಲರಿ. 2. ಉತ್ತರ ಮತ್ತು ದಕ್ಷಿಣ ಭಾಗದ ಐದು ಹಂತದ ಆರ್.ಸಿ.ಸಿ. ಪ್ರೇಕ್ಷಕರ ಗ್ಯಾಲರಿ. 3. ಆವರಣ ಗೋಡೆ ನಿರ್ಮಾಣ 4. ಹಳೆಯ ಪೆವಿಲಿಯನ್ ಕಟ್ಟಡದಲ್ಲಿನ ಕಾಮಗಾರಿ 5. ಆರ್.ಸಿ.ಸಿ. ಚರಂಡಿ ಕಾಮಗಾರಿ 6. ಬಾಸ್ಕೆಟ್ ಬಾಲ್ , ವಾಲಿಬಾಲ್ ಮತ್ತು ಕಬಡ್ಡಿ ಅಂಕಣಗಳು 7. ಓಟದ ಟ್ರ್ಯಾಕ್, ಫುಟ್ಬಾಲ್ ಅಂಕಣದ ಲಾನ್, ಫೌಂಟೇನ್ ಕಾಮಗಾರಿ 8. ರಸ್ತೆ ಮತ್ತು ವಾಹನ ನಿಲುಗಡೆ ಸ್ಥಳದ ಕಾಮಗಾರಿ 9. ವಿದ್ಯುತ್ ವ್ಯವಸ್ಥೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ರಾಜ್ಯ ವಲಯದ ಬಂಡವಾಳ ವೆಚ್ಚ ಕಾರ್ಯಕ್ರಮದಡಿ ಹೆಚ್ಚುವರಿ ಪ್ರೇಕ್ಷಕರ ಗ್ಯಾಲರಿ ಮತ್ತಿತರೆ ಕಾಮಗಾರಿಗಳನ್ನು ಕೈಗೊಳ್ಳಲು ರೂ.100.00 ಲಕ್ಷಗಳನ್ನು ಮಂಜೂರು ಮಾಡಿ, ರೂ.75.00 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಕಾಮಗಾರಿ ಪ್ರಗತಿಯಲ್ಲಿದೆ.

ಆ)	ಈ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್, ಕಬಡ್ಡಿ ಪ್ರಾಂಗಣ ಹಾಗೂ ಕಬಡ್ಡಿ ಮ್ಯಾಟ್ ಬೇಕಾಗಿರುವುದು ಅವಶ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ.
ಇ)	ಹಾಗಿದ್ದಲ್ಲಿ, ಇವುಗಳೆಲ್ಲವನ್ನು ಸರಬರಾಜು/ ನಿರ್ಮಾಣ ಮಾಡುವ ಯೋಜನೆ ಸರ್ಕಾರಕ್ಕಿದೆಯೇ; ಇಲ್ಲವಾದಲ್ಲಿ ಇದಕ್ಕೆ ಕಾರಣವೇನು;	ಬೀದರ್ ಜಿಲ್ಲೆಯಲ್ಲಿ ಬಳಕೆಗಾಗಿ 02 ಸೆಟ್ ಆಧುನಿಕ ಗುಣಮಟ್ಟದ ಕಬಡ್ಡಿ ಮ್ಯಾಟ್‌ಗಳನ್ನು ಒದಗಿಸಲಾಗಿದ್ದು, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ವತಿಯಿಂದ ಕಬಡ್ಡಿ ಅಂಕಣ ನಿರ್ಮಿಸಲಾಗಿದೆ. ಪ್ರತ್ಯೇಕ ಕಬಡ್ಡಿ ಪ್ರಾಂಗಣ ನಿರ್ಮಾಣ ಹಾಗೂ ಸಿಂಥೆಟಿಕ್ ಅಥ್ಲೆಟಿಕ್ ಟ್ರ್ಯಾಕ್ ಅಳವಡಿಕೆ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದಿರುವುದಿಲ್ಲ.
ಈ)	ಕ್ರೀಡಾ ವಸತಿ ಶಾಲೆಗೆ ನೂತನ ಸುಸಜ್ಜಿತ ಕಟ್ಟಡದ ನಿರ್ಮಾಣ ಮಾಡಿ ಯಾವ ವರ್ಷದಲ್ಲಿ ಪೂರ್ಣಗೊಳಿಸಿ ಅಲ್ಲಿಗೆ ವರ್ಗಾಯಿಸುವ ಯೋಜನೆಯಿದೆ; ಹಾಲಿ ವಸತಿ ಶಾಲೆಯು ಬಹಳ ದುಃಸ್ಥಿತಿಯಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ?	ಬೀದರ್ ನ ಜಿಲ್ಲಾ ಕ್ರೀಡಾ ವಸತಿ ಶಾಲೆಗೆ ಪ್ರಸ್ತುತ ಸ್ವಂತ ಕಟ್ಟಡ ಇಲ್ಲದ ಹಿನ್ನೆಲೆಯಲ್ಲಿ ಲಭ್ಯ ಇಲಾಖಾ ಕಟ್ಟಡದಲ್ಲಿ ಕ್ರೀಡಾಪಟುಗಳಿಗೆ ವಸತಿ ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸ ಕ್ರೀಡಾ ವಸತಿ ನಿಲಯವನ್ನು ರೂ 250.00 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಸರ್ಕಾರದ ಆದೇಶ ಸಂಖ್ಯೆ:ವೈಎಸ್‌ಡಿ/ಇಪಿಇ/36/2021; ದಿನಾಂಕ:26.10.2021ರಲ್ಲಿ 1/3ನೇ ಭಾಗ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಪ್ರಸ್ತುತ, ಟೆಂಡರ್ ಆಹ್ವಾನಿಸಲು ಕ್ರಮ ವಹಿಸಲಾಗಿದೆ.

ವೈಎಸ್‌ಡಿ/ಇಬಿಬಿ/215/2021

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.